# ಭಾರತದಲ್ಲಿ ಮನೋವಿಜ್ಞಾನದ ಬೆಳವಣಿಗೆ

## Psychology Development in India

## ಇಂದಿರಾ ಜೈಪ್ರಕಾಶ್

ಭಾರತದಲ್ಲಿ ಶೈಕ್ಷಣಿಕ ಅಧ್ಯಯನದ ವಿಷಯವಾಗಿ ಮನೋವಿಜ್ಞಾನ ಬೆಳೆದಿದ್ದು 20 ನೆಯ ಶತಮಾನದಲ್ಲಿ. ಆದರೆ ಮನಸ್ಸು ಮತ್ತು ಮಾನವ ವರ್ತನೆ ಸಾವಿರಾರು ವರ್ಷಗಳಿಂದ ಭಾರತೀಯ ಪ್ರಾಜ್ಞರುಗಳ ಚಿಂತನೆ ಮತ್ತು ವಿಶ್ಲೇಷಣೆಯ ವಿಷಯವಾಗಿತ್ತು. ಭಾರತದಲ್ಲಿ ಮನೋವಿಜ್ಞಾನದ ಅಸ್ತಿತ್ವವನ್ನು ಸ್ಥೂಲವಾಗಿ ಪ್ರಾಚೀನ ಪರಂಪರೆ, ಬ್ರಿಟೀಷರ ಆಧಿಪತ್ಯದಿಂದ ಭಾರತ ಸ್ವತಂತ್ರವಾಗುವರೆಗಿನ ಅವಧಿ, ಮತ್ತು ಸ್ವಾತಂತ್ರ್ಯಾನಂತರದ ಅವಧಿ ಎಂದು ಮೂರು ಕಾಲಾವಧಿಗಳಲ್ಲಿ ಪರೀಕ್ಷಿಸಬಹುದು.

ಪ್ರಾಚೀನ ಪರಂಪರೆಯಲ್ಲಿ, ವೇದಗಳು ಮನೋವಿಜ್ಞಾನದ ಅಧ್ಯಯನಕ್ಕೆ ಅಡಿಪಾಯ ಎನ್ನಬಹುದು. ನಂತರ ಉಪನಿಷತ್ತು ಮತ್ತು ಭಗವದ್ಗೀತೆಗಳಲ್ಲಿ ಮಾನವ ವರ್ತನೆಯ ಬಗ್ಗೆ ಹೆಚ್ಚು ವಿವರಗಳನ್ನು ನೋಡಬಹುದು. ವೈದಿಕ ಪರಂಪರೆಯಲ್ಲಿ ಮಾನವನ ಆಧ್ಯಾತ್ಮಿಕ ಉನ್ನತಿಯ ಆಕಾಂಕ್ಷೆಯೇ ಪ್ರಬಲವಾಗಿದ್ದು ಮುಂದಿನ ಅನೇಕ ಧಾರ್ಮಿಕ ಮಾರ್ಗಗಳಲ್ಲೂ ಇದೇ ಜೀವನದ ಮುಖ್ಯ ಉದ್ದೇಶ ಎಂದು ಪರಿಗಣಿಸಲ್ಪಟ್ಟಿತ್ತು. ವೇದ-ಉಪನಿಷದ್‌ಗಳಲ್ಲದೆ, ಭಾರತದಲ್ಲಿ ಬೌದ್ಧ ಮತ್ತು ಜೈನಧರ್ಮಗಳು ಬೆಳೆದು ಬಂದು ಅವುಗಳಲ್ಲೂ ಮನಸ್ಸು ಮತ್ತು ಮಾನವ ವರ್ತನೆಯ ಬಗ್ಗೆ ಅನೇಕ ವಾದಗಳು ಹುಟ್ಟಿಕೊಂಡಿದ್ದವು. ಸಾವಿರಾರು ವರ್ಷಗಳವರೆಗೆ, ಭಾರತದಲ್ಲಿ ಮಾನವ ಜೀವನದ ಉದ್ದೇಶ ನಾಲ್ಕು ಮುಖ್ಯ ಪುರುಷಾರ್ಥಗಳಾದ, ಧರ್ಮ, ಆರ್ಥ, ಕಾಮ ಮತ್ತು ಎಲ್ಲದರಿಂದ ವಿಮೋಚನೆ ಹೊಂದುವ, ಮೋಕ್ಷಗಳನ್ನು ಸಾಧಿಸುವುದು ಎಂದೇ ತಿಳಿಯಲಾಗಿತ್ತು. ಇಂತಹ ಧಾರ್ಮಿಕ ಚಿಂತನೆಯ ಜೊತೆಜೊತೆಗೆ ಲೈಂಗಿಕ ವಿಜ್ಞಾನದ ಬಗ್ಗೆ ವಾತ್ಸಾಯನ ರಚಿಸಿದ ವಿದ್ವತ್ಪೂರ್ಣ ಕೃತಿ ಕಾಮಸೂತ್ರ; ರಾಜಕಾರಣ, ಗುಂಪು ವ್ಯವಹಾರಗಳ ಬಗ್ಗೆ ಕೌಟಿಲ್ಯ ರಚಿಸಿದ ಅರ್ಥಶಾಸ್ತ್ರ; ನೃತ್ಯ, ನಾಟಕ, ಅಭಿನಯ ಮತ್ತು ಭಾವನೆಗಳ ಅಭಿವ್ಯಕ್ತಿಯ ಬಗ್ಗೆ ಭರತಮುನಿಯ ನಾಟ್ಯಶಾಸ್ತ್ರ; ದೇಶೀಯ ವೈದ್ಯಕೀಯ ಪದ್ಧತಿಯಾದ ಆಯುರ್ವೇದ ಇವುಗಳೂ ಮನೋವಿಜ್ಞಾನದ ಜ್ಞಾನಕ್ಕೆ ಪೂರಕವಾಗಿದ್ದವು.

ಭಾರತೀಯ ಚಿಂತನೆಯಲ್ಲಿ ಅನೇಕ ಪಂಥಗಳು ಅಥವಾ ವ್ಯವಸ್ಥೆಗಳಿದ್ದು ಅವನ್ನು "ದರ್ಶನ"ಗಳು ಎಂದು ಕರೆಯಲಾಗುತ್ತದೆ. ಮನೋವೈಜ್ಞಾನಿಕ ಸಿದ್ಧಾಂತಗಳು ದರ್ಶನಗಳ ಅವಿಭಾಜ್ಯ ಭಾಗವಾಗಿವೆ. ದರ್ಶನಗಳಲ್ಲಿ ಸ್ವ, ಚೇತನ, ಅನುಭವ, ಪ್ರತ್ಯಕ್ಷಣ, ಭಾಷೆ, ಸಂವೇಗ,

ಮನೋವಿಕೃತಿ ಮತ್ತು ಅವುಗಳ ಪರಿಹಾರ ಮುಂತಾದ ವಿಷಯಗಳ ಬಗ್ಗೆ ವಿವರಣೆಗಳಿವೆ. ಹಿಂದೆ ಜ್ಞಾನ ಗುರುವಿನಿಂದ ಶಿಷ್ಯರಿಗೆ ಬೋಧನೆಯ ಮೂಲಕ, ಬಾಯಿಂದ ಬಾಯಿಗೆ, ಬರಹವಿಲ್ಲದೆ ವರ್ಗಾಯಿಸಲಾಗುತ್ತಿತ್ತು. ಇದನ್ನು ಸುಲಭಗೊಳಿಸಲು ಜ್ಞಾನವನ್ನು 'ಸೂತ್ರ'ಗಳ ರೂಪದಲ್ಲಿ ಬೋಧಿಸಲಾಗುತ್ತಿತ್ತು. ಬಾದರಾಯಣನ ವೇದಸೂತ್ರ, ಪತಂಜಲಿಯ ಯೋಗಸೂತ್ರ, ಗೌತಮನ ನ್ಯಾಯಸೂತ್ರ ಇದಕ್ಕೆ ಉದಾಹರಣೆಗಳು. ಮೂಲ ಗ್ರಂಥ ಅಥವಾ ಬೋಧನೆಯನ್ನು ವಿವರಣೆ, ಟೀಕೆ ಮತ್ತು ಭಾಷ್ಯಗಳಿಂದ ವಿಸ್ತರಿಸಿ ವಾದ-ಪ್ರತಿವಾದಗಳಿಗೆ ಒಳಪಡಿಸಲಾಗುತ್ತಿತ್ತು. ಪ್ರತಿಪಂಥದಲ್ಲೂ ತರ್ಕಕ್ಕೆ ವಿಶೇಷ ಸ್ಥಾನವಿದ್ದು, ವಿಚಾರ ವಿನಿಮಯ ಮತ್ತು ಸಿದ್ಧಾಂತಗಳಿಗೆ ಸವಾಲು ಒಡ್ಡಿ ಅವುಗಳನ್ನು ಪರೀಕ್ಷಿಸುವ ಪದ್ಧತಿಯ ಹಿನ್ನೆಲೆಯಲ್ಲಿ ಮನೋವಿಜ್ಞಾನ ಬೆಳೆಯಿತು. ದೇಹ ಮನಸ್ಸುಗಳನ್ನೂ ಮೀರಿದ ಶುದ್ಧ ಚೇತನ, ಆತ್ಮಸಾಕ್ಷಾತ್ಕಾರ, ಯೋಗದಿಂದ ಮನೋನಿಗ್ರಹ, ಕರ್ಮ ಮತ್ತು ಸಂಸ್ಕಾರ ಮುಂತಾದ ಕಲ್ಪನೆಗಳು ಭಾರತೀಯ ಚಿಂತನೆಗೆ ವಿಶಿಷ್ಟವಾಗಿದ್ದು, ಪಾಶ್ಚಾತ್ಯ ಮನೋವೈಜ್ಞಾನಿಕ ಸಂಕಲ್ಪನೆಗಳಿಗೆ ಭಿನ್ನವಾದ ವಾದಗಳನ್ನು ನೋಡಬಹುದು.

ಬ್ರಿಟೀಷರ ಕಾಲ: ಭಾರತದಲ್ಲಿ ಬ್ರಿಟಿಷರು ನೆಲೆಯೂರಿದ ಮೇಲೆ ಅವರ ಆಧಿಪತ್ಯದಲ್ಲಿ ಜನಜೀವನದಲ್ಲಿ ಮಹತ್ತರ ಬದಲಾವಣೆಗಳಾದವು. ಬ್ರಿಟೀಷರು ಪ್ರಾಚೀನ ದೇಶೀಯ ವಿಚಾರಗಳನ್ನು ಹಿಂದಿಕ್ಕಿ ಆಂಗ್ಲ ಸಂಸ್ಕೃತಿಯನ್ನು ವೈಭವೀಕರಿಸುವ ವಿದ್ಯಾಭ್ಯಾಸ ಪದ್ಧತಿಯನ್ನು ಪ್ರೋತ್ಸಾಹಿಸಿದರು. ಇದರ ಮುಖ್ಯ ಉದ್ದೇಶ, ಬ್ರಿಟೀಷರ ಆಡಳಿತಕ್ಕೆ ಬೇಕಾಗುವ ಕಾರಕೂನರನ್ನು ತಯಾರಿಸುವುದಾಗಿತ್ತು. ಬ್ರಿಟೀಷರ ಪ್ರಯತ್ನಗಳ ಒಂದು ಲಾಭವೆಂದರೆ, ಭಾರತೀಯರು ಪಾಶ್ಚಾತ್ಯ ವೈಜ್ಞಾನಿಕ ಪದ್ಧತಿಗಳು ಮತ್ತು ಅನ್ವೇಷಣೆಗಳ ಬಗ್ಗೆ ತಿಳಿಯಲು ಸಾಧ್ಯವಾಯಿತು. ಆಂಗ್ಲೀಕರಣದ ನಂತರವೂ ಭಾರತದ ಆಧ್ಯಾತ್ಮಿಕ ಚಿಂತನೆ ಮುಂದುವರಿಯಿತಲ್ಲದೆ ಅವುಗಳನ್ನು ಪಾಶ್ಚಾತ್ಯರಿಗೆ ತಿಳಿಸಿಕೊಡುವ ಪ್ರಯತ್ನಗಳೂ ನಡೆದವು. ಕೃಷ್ಣಚಂದ್ರ ಭಟ್ಟಾಚಾರ್ಯ, ಎಸ್, ರಾಧಾಕೃಷ್ಣನ್, ಸ್ವಾಮಿ ವಿವೇಕಾನಂದ, ಶ್ರೀ ಅರಬಿಂದ, ನಂತರ ಬಾಲ ಗಂಗಾಧರ ತಿಲಕ್, ಮಹಾತ್ಮ ಗಾಂಧಿ ಮುಂತಾದವರು ಭಾರತದ ಆಧ್ಯಾತ್ಮಿಕ ಪರಂಪರೆಯನ್ನು ಪಾಶ್ಚಾತ್ಯ ತತ್ವಶಾಸ್ತ್ರದ ಹಿನ್ನೆಲೆಯಲ್ಲಿ ಮರುವಿಶ್ಲೇಷಣೆ ನಡೆಸಿದರು. ಆದರೆ, ಶೈಕ್ಷಣಿಕ ಕ್ಷೇತ್ರದಲ್ಲಿ ಪಾಶ್ಚಾತ್ಯ ಪಠ್ಯಕ್ರಮ, ಅಧ್ಯಯನ ವಿಧಾನಗಳನ್ನು ವಿದ್ಯಾಲಯಗಳು ಅಳವಡಿಸಿಕೊಂಡಿದ್ದವು. ಮನೋವಿಜ್ಞಾನವೂ ಇದಕ್ಕೆ ಹೊರತಾಗಿರಲಿಲ್ಲ. ಮೊದಲನೆ ಪೀಳಿಗೆಯ ಮನೋವಿಜ್ಞಾನದ ಅಧ್ಯಯನ ಮಾಡುವವರು ಸಾಧಾರಣವಾಗಿ ಪಾಶ್ಚಾತ್ಯ ದೇಶಗಳಲ್ಲಿ ತರಬೇತಿ ಹೊಂದಿರುತ್ತಿದ್ದರು. ಪಾಶ್ಚಾತ್ಯದೇಶಗಳು, ಅದರಲ್ಲೂ ಅಮೆರಿಕೆಯಲ್ಲಿ ಪ್ರಚಲಿತ ಪಠ್ಯಕ್ರಮ, ಪುಸ್ತಕಗಳು, ಸಂಶೋಧನಾ ವಿಧಾನಗಳು ಇಲ್ಲೂ ಯಥಾವತ್ತಾಗಿ ನಕಲುಗೊಳ್ಳುತ್ತಿದ್ದವು. ಈ ಮನೋವಿಜ್ಞಾನಿಗಳು ಪ್ರಪಂಚವನ್ನು ನೋಡುವ ದೃಷ್ಟಿ 'ಯೂರೋ-ಅಮೇರಿಕನ್' ಪ್ರಭಾವಕ್ಕೆ ಒಳಗಾಗಿದ್ದು ಭಾರತದ ಪರಿಸ್ಥಿತಿಗೆ

ಪ್ರಸ್ತುತವಾಗಿರುತ್ತಿರಲಿಲ್ಲ. ಈಗಲೂ ಹೆಚ್ಚಾಗಿ ಪಾಶ್ಚಾತ್ಯ ಸಂಕಲ್ಪನೆ, ಸಿದ್ಧಾಂತಗಳು ಭಾರತದಲ್ಲಿ ಮನೋವಿಜ್ಞಾನ ಅಧ್ಯಯನದ ಕೇಂದ್ರವಾಗಿವೆ.

ಭಾರತದ ಶಿಕ್ಷಣ ಕ್ಷೇತ್ರದಲ್ಲಿ ಮನಶ್ಶಾಸ್ತ್ರ ಎನ್ನುವುದು ತತ್ವಶಾಸ್ತ್ರ ವಿಭಾಗಗಳಲ್ಲಿ ಬೋಧಿಸಲ್ಪಡುತ್ತಿತ್ತು. ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ 'ಮೆಂಟಲ್ ಅಂಡ್ ಮಾರಲ್ ಫಿಲಾಸಫಿ'ಯ ಪ್ರಾಧ್ಯಾಪಕರಾಗಿದ್ದ ಬ್ರಜೇಂದ್ರರ ನಾಥ್ ಸೀಲ್ 1905ರಲ್ಲಿ ಪ್ರಪ್ರಥಮವಾಗಿ ಪ್ರಾಯೋಗಿಕ ಮನಶ್ಶಾಸ್ತ್ರದ ಪಠ್ಯಕ್ರಮ ರೂಪಿಸಿ ಪ್ರಾತ್ಯಕ್ಷಿಕೆಗೆಂದು ಪ್ರಯೋಗಶಾಲೆ ತೆರೆದರು. ಹಾರ್ವರ್ಡ್ನಲ್ಲಿ ಹ್ಯೂಗೋ ಮುಂಸ್ಟರ್‌ಬರ್ಗನ ಬಳಿ ತರಬೇತಿ ಪಡೆದಿದ್ದ ನರೇಂದ್ರ ನಾಥ್ ಸೇನ್‌ಗುಪ್ತ, 1916ರಲ್ಲಿ ಈ ಪ್ರಯೋಗಶಾಲೆಯನ್ನು ಉತ್ತಮಗೊಳಿಸಿ ಪ್ರಾಯೋಗಿಕ ಮನಶ್ಶಾಸ್ತ್ರದ ವಿಭಾಗ ಪ್ರಾರಂಭಿಸಿದರು. ಮನೋಭೌತಿಕ ಪ್ರಯೋಗಗಳು, ಆಳ ಪ್ರತ್ಯಕ್ಷಣ, ಅವಧಾನ ಮುಂತಾದವುಗಳನ್ನು ಕುರಿತು ಪ್ರಯೋಗಗಳು ನಡೆದವು. ಈ ವಿಷಯ ವೈಜ್ಞಾನಿಕ ವಿಧಾನವನ್ನು ಅನುಸರಿಸುತ್ತದೆ ಎಂದು ಸಿದ್ಧವಾಗಿ ಭಾರತೀಯ ವಿಜ್ಞಾನ ಕಾಂಗ್ರೆಸ್ 1923ರಲ್ಲಿ ಮನೋವಿಜ್ಞಾನವನ್ನು ಒಂದು ವಿಭಾಗವಾಗಿ ಸೇರಿಸಿಕೊಂಡಿತು. 1924ರಲ್ಲಿ ಭಾರತೀಯ ಮನೋವಿಜ್ಞಾನ ಸಂಸ್ಥೆ ಹುಟ್ಟಿ, 1925ರಲ್ಲಿ ಇಂಡಿಯನ್ ಜರ್ನಲ್ ಆಫ್ ಸೈಕಾಲಜಿ ಎಂಬ ವಿದ್ವತ್ಪತ್ರಿಕೆ ಪ್ರಾರಂಭವಾಯಿತು. ಹೀಗೆ ಮನಶ್ಶಾಸ್ತ್ರ ತತ್ವಶಾಸ್ತ್ರದಿಂದ ಬೇರ್ಪಟ್ಟು ಸ್ವತಂತ್ರ ವೈಜ್ಞಾನಿಕ ಸ್ಥಾನಗಳಿಸಿತು. 1922 ರಲ್ಲಿ ಸೇನ್‌ಗುಪ್ತರ ಸ್ಥಾನಕ್ಕೆ ಬಂದ ಗಿರೀಂದ್ರ ಶೇಖರ್ ಬೋಸ್ ಮನೋವೈದ್ಯರಾಗಿದ್ದು ಫ್ರಾಯ್ಡ್‌ನ ಸಂಪರ್ಕ ಹೊಂದಿದ್ದರು. 1922ರಲ್ಲಿ ಇಂಡಿಯನ್ ಸೈಕೊಅನಾಲಿಟಿಕ್ ಸೊಸೈಟಿ ಪ್ರಾರಂಭಿಸಿದ್ದು 1924ರಲ್ಲಿ ಅದು ಇಂಟರ್ ನ್ಯಾಶನಲ್ ಸೈಕೋಅನಾಲಿಟಿಕ್ ಸಂಸ್ಥೆಯ ಒಂದು ಅಂಗವಾಯಿತು. ಬೋಸ್ 1938 ರಲ್ಲಿ ಪ್ರಾಯೋಗಿಕ ಮನೋವಿಜ್ಞಾನ ಶಾಖೆ ತೆರದದ್ದಲ್ಲದೆ, ಯೂಂಗ್, ಸ್ಪಿರ್ಮನ್ ಮುಂತಾದವರನ್ನು ಇಂಡಿಯನ್ ಸೈನ್ಸ್ ಕಾಂಗ್ರೆಸ್‌ನ ಬೆಳ್ಳಿಹಬ್ಬಕ್ಕೆ ಆಹ್ವಾನಿಸಿದರು. ಬೋಸ್ 1940ರಲ್ಲಿ ಕಲ್ಕತ್ತೆಯಲ್ಲಿ 'ಲುಂಬಿನಿ ಪಾರ್ಕ್ ಮೆಂಟಲ್ ಹಾಸ್ಪಿಟಲ್' ಸ್ಥಾಪಿಸಿ 1947ರಲ್ಲಿ 'ಸಮೀಕ್ಷ' ಎಂಬ ವಿದ್ವತ್ ಪತ್ರಿಕೆ ಪ್ರಾರಂಭಿಸಿದರು. ಬೋಸ್ ರಿಂದ ತರಬೇತಿ ಪಡೆದ ಎಚ್.ಪಿ. ಮೇಯ್ತಿ 1946ರಲ್ಲಿ ಪಾಟ್ನಾದಲ್ಲಿ ಮನಶ್ಶಾಸ್ತ್ರ ವಿಭಾಗ ಸ್ಥಾಪಿಸಿ ಶೈಕ್ಷಣಿಕ ಮತ್ತು ವೃತ್ತಿ ಮಾರ್ಗದರ್ಶನವನ್ನು ಪ್ರಾರಂಭಿಸಿದರು.

1916ರಲ್ಲಿ ಸ್ಥಾಪಿತವಾಗಿದ್ದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ದಕ್ಷಿಣಭಾರತದ ಪ್ರಥಮ ಮನೋವಿಜ್ಞಾನ ವಿಭಾಗ ಪ್ರಾರಂಭವಾಯಿತು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿದ್ದ ಪ್ರೊಫೆಸರ್ ಗೋಪಾಲಸ್ವಾಮಿಯವರು 1924ರಲ್ಲಿ ಮನಶ್ಶಾಸ್ತ್ರದ ವಿಭಾಗ ತೆರೆದು ದೇಶದ ಪ್ರಥಮ ಪ್ರಾಣಿ ಪ್ರಯೋಗಾಲಯ ಪ್ರಾರಂಭಿಸಿದರು. ಚಾರ್ಲಸ್ ಸ್ಪಿಯರ್‌ಮನ್‌ನ ಬಳಿ ಡಾಕ್ಟರೇಟ್ ಪಡೆದ ಡಾ, ಗೋಪಾಲಸ್ವಾಮಿಯವರು ಲಂಡನ್‌ನಿಂದ ಮರಳುವಾಗ ಟ್ರಾನ್ಸ್‌ಪಾಂಡರ್ ಒಂದನ್ನು ತಂದಿದ್ದು ದೇಶದ ಪ್ರಥಮ ರೇಡಿಯೋ ಸ್ಟೇಶನ್ ಸ್ಥಾಪಿಸಿ "ಆಕಾಶವಾಣಿ' ಎಂದು ಅದಕ್ಕೆ ನಾಮಕರಣ ಮಾಡಿದರು. ಆರುವರ್ಷಗಳ ಕಾಲ ಅವರೇ ಖಾಸಗಿಯಾಗಿ ನಡೆಸುತ್ತಿದ್ದ ರೇಡಿಯೋ ಸ್ಟೇಶನ್‌ಅನ್ನು ಮುಂದೆ ಸರ್ಕಾರ ತನ್ನ ವಶಕ್ಕೆ

ತೆಗೆದುಕೊಂಡಿತು. 1956ರಲ್ಲಿ ಆಲ್ ಇಂಡಿಯಾ ರೇಡಿಯೋ ಎನ್ನುವುದರ ಬದಲಾಗಿ "ಆಕಾಶವಾಣಿ" ಎಂದು ಡಾ, ಗೋಪಾಲಸ್ವಾಮಿಯವರು ಇಟ್ಟಿದ್ದ ಹೆಸರನ್ನೇ ಸ್ವೀಕರಿಸಿತು. ಈ ಪೀಳಿಗೆಯ ವಿದ್ವಾಂಸರು ಪ್ರಯೋಗಾತ್ಮಕವಾಗಿ ಪಾಶ್ಚಾತ್ಯ ಪದ್ಧತಿಯನ್ನು ಅನುಕರಿಸಿದರೂ ಭಾರತೀಯ ಚಿಂತನೆಗಳನ್ನೂ ಅಭ್ಯಸಿಸುತ್ತಿದ್ದು ಪೂರ್ವ-ಪಶ್ಚಿಮ ಎಂದು ಎರಡು ಬೌದ್ಧಿಕ ಪ್ರಪಂಚಗಳನ್ನು ಒಂದುಗೂಡಿಸಿದ್ದರು.

ಸ್ವಾತಂತ್ರ್ಯಾನಂತರ: ಭಾರತದ ಸ್ವಾತಂತ್ರ್ಯಾನಂತರ ವೇಗವಾಗಿ ಅನೇಕ ವಿಶ್ವವಿದ್ಯಾಲಯಗಳಲ್ಲಿ ಮನೋವಿಜ್ಞಾನದ ವಿಭಾಗಗಳು ತೆರೆಯಲ್ಪಟ್ಟವು. ಉಚ್ಚಶಿಕ್ಷಣದ ಮಹತ್ವವನ್ನು ಅರಿತ ಸರ್ಕಾರ ಅನೇಕ ಹೊಸ ಉಚ್ಚಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿತು. 1947ರಲ್ಲಿ ದೇಶ ಇಬ್ಭಾಗವಾಗಿ ಅನೇಕ ದುರಂತಗಳು ಎದುರಾದಾಗ ಯುನೆಸ್ಕೋದ ಸಹಕಾರದೊಡನೆ ರಾಷ್ಟ್ರ ಸರ್ಕಾರ ಕೋಮುಗಲಭೆಗೆ ಕಾರಣ ಹುಡುಕುವ ಅಧ್ಯಯನವನ್ನು ಕೈಗೆತ್ತಿಕೊಂಡಿತು. ಈ ಸಂದರ್ಭದಲ್ಲಿ ಗಾರ್ಡನರ್ ಮರ್ಫಿಯೊಡನೆ ಅನೇಕ ದೇಶಿಯ ಮನೋವಿಜ್ಞಾನಿಗಳು ಕೆಲಸ ಮಾಡಿದರು. 1947 ರಲ್ಲಿ ಯು.ಪಿ. ಸೈಕಲಾಜಿಕಲ್ ಬ್ಯೂರೋ ಸ್ಥಾಪಿತಗೊಂಡು ಸೋಹನ್ ಲಾಲ್, ಸಿ.ಎಂ. ಭಾಟಿಯ ಮತ್ತು ಎಸ್.ಎನ್ ಮೆಹರೊತ್ರ ಅವರ ಮಾರ್ಗದರ್ಶನದಲ್ಲಿ ಭಾರತದ ಪರಿಸ್ಥಿತಿಗೆ ಸೂಕ್ತವಾದ ಮಾನಸಿಕ ಪರೀಕ್ಷಣಗಳನ್ನು ತಯಾರಿಸುವ ಕೆಲಸ ನಡೆಯಿತು. 1956ರಲ್ಲಿ ಯುನಿವರ್ಸಿಟಿ ಗ್ರಾಂಟ್ಸ್ ಕಮಿಶನ್ (ಯು.ಜಿ.ಸಿ) (ವಿಶ್ವವಿದ್ಯಾಲಯ ಅನುದಾನ ಆಯೋಗ) ಸ್ಥಾಪಿತವಾಗಿ ಅದರ ಸಹಾಯದಿಂದ 1960ರ ವೇಳೆಗೆ 32 ಮನೋವಿಜ್ಞಾನ ವಿಭಾಗಗಳು ತೆರೆಯಲ್ಪಟ್ಟವು. ಇವು ರಾಷ್ಟ್ರದ ಉಚ್ಚಶಿಕ್ಷಣ ನಿಯಮಗಳ ಪೂರೈಕೆಗೆ ಸೃಷ್ಟಿಯಾದವೇ ಹೊರತು ಯಾವುದೇ ವ್ಯವಸ್ಥಿತ ಯೋಜನೆಯಿಂದಲ್ಲ. ಇಂತಹ ವಿಭಾಗಗಳ ಕೆಲಸವೂ ಕೂಡಾ ಮುಖ್ಯಸ್ಥರ ಆಸಕ್ತಿಯನ್ನು ಅವಲಂಬಿಸಿರುತ್ತಿದ್ದು ರಾಷ್ಟ್ರದ ಅಗತ್ಯ ಅಥವಾ ವಿಷಯದ ವ್ಯಾಪ್ತಿಗೆ ಸಂಬಂಧಿಸಿರುತ್ತಿರಲಿಲ್ಲ. 1960ರ ವೇಳೆಗೆ ಇಂತಹ ವಿಭಾಗಗಳ ಗುಣಮಟ್ಟದ ಬಗ್ಗೆ ಕಾಳಜಿ ಹೊಂದಿದ ಯು.ಜಿ.ಸಿ, ಕೆಲವು ವಿಶ್ವವಿದ್ಯಾಲಯಗಳಲ್ಲಿ ವಿಶೇಷ ಧನಸಹಾಯ ನೀಡಿ ಹೆಚ್ಚಿನ ಸಂಶೋಧನೆಗೆ ಕೇಂದ್ರಗಳನ್ನು ಸ್ಥಾಪಿಸತೊಡಗಿತು. ವಿದೇಶಗಳಲ್ಲಿ ಹೆಚ್ಚಿನ ತರಬೇತಿ, ಸಂಶೋಧನೆಗೆ ಸಹಾಯ ಮತ್ತು ವಿದ್ವಾಂಸರ ವಿನಿಮಯಕ್ಕೂ ಪ್ರೋತ್ಸಾಹ ನೀಡಲಾಯಿತು.

ವಿಶ್ವವಿದ್ಯಾಲಯಗಳಾಚೆ ಮನೋವಿಜ್ಞಾನದ ಬೆಳವಣಿಗೆ ಕಾಣಿಸಿಕೊಂಡು ಡಿಫೆನ್ಸ್ ಸೈನ್ಸ್ ಆರ್ಗನೈಝೇಶನ್‌ನಲ್ಲಿ ಸೈಕಲಾಜಿಕಲ್ ರಿಸರ್ಚ ವಿಂಗ್ ಎಂದು ಮನೋವೈಜ್ಞಾನಿಕ ಸಂಶೋಧನಾ ವಿಭಾಗ ತೆರೆಯಿತು. ನೈದಾನಿಕ ಕ್ಷೇತ್ರದಲ್ಲಿ, ಅಖಿಲ ಭಾರತ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ 1955ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿತವಾಯಿತು. ದಿ ಅಹಮದಾಬಾದ್ ಟೆಕ್ಸ್‌ಟೈಲ್ ರಿಸರ್ಚ್ ಇನಸ್ಟಿಟ್ಯೂಟ್(ಅಟಿರಾ) 1950ರಲ್ಲಿ ಸ್ಥಾಪಿತವಾಗಿ ಅನೇಕ ವಿದೇಶಿ ಸಂಶೋಧಕರನ್ನು ಆಕರ್ಷಿಸಿತು. 1960-70 ರಲ್ಲಿ ಎಲ್ಲಾ ಇಂಡಿಯನ್ ಇನಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗಳಲ್ಲಿ, ಇಂಡಿಯನ್ ಇನಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ಗಳಲ್ಲಿ, ಅಗ್ರಿಕಲ್ಚರ್ ಯೂನಿವರ್ಸಿಟಿಗಳಲ್ಲಿ, ವೈದ್ಯಕೀಯ ಕಾಲೇಜುಗಳಲ್ಲಿ ಮನೋವಿಜ್ಞಾನ ಅಧ್ಯಯನ ಅಥವಾ

ಸಂಶೋಧನೆಯ ವಿಷಯವಾಯಿತು. ಪಾಟ್ನಾದ ಎ.ಎನ್ ಎಸ್. ಇನ್ಸಟಿಟ್ಯೂಟ್ ಆಫ್ ಸೋಶೀಯಲ್ ಸ್ಟಡೀಸ್, ದೆಹಲಿಯ ಸೆಂಟರ್ ಫಾರ್ ಸ್ಟಡಿ ಆಫ್ ಡೆವಲಪಿಂಗ್ ಸೊಸೈಟೀಸ್ ಮತ್ತು ಹೈದರಾಬಾದ್‌ನ ನ್ಯಾಶನಲ್ ಇನ್ಸಟಿಟ್ಯೂಟ್ ಆಫ್ ಕಮ್ಯೂನಿಟಿ ಡೆವಲಪ್‌ಮೆಂಟ್‌ಗಳಲ್ಲಿ ಸಂಶೋಧನೆಗೆ ಅವಕಾಶ ಲಭಿಸಿತು. ಇಂದು, ಅನೇಕ ಸರ್ಕಾರಿ, ಸರ್ಕಾರೇತರ, ಮತ್ತು ಸ್ವಾಯತ್ತ ಸಂಸ್ಥೆಗಳಲ್ಲಿ ಮತ್ತು ನೂರಾರು ಪದವಿ ಕಾಲೇಜುಗಳಲ್ಲಿ ಮನೋವಿಜ್ಞಾನ ಅಧ್ಯಯನದ ವಿಷಯವಾಗಿದೆ. ಯು.ಜಿ.ಸಿಯಿಂದ ಸುಮಾರು 192 ಉಚ್ಚಶಿಕ್ಷಣ ಸಂಸ್ಥೆಗಳು ಮಾನ್ಯತೆ ಪಡೆದಿದ್ದು ಸಾಧಾರಣವಾಗಿ ಇವುಗಳಲ್ಲಿ ಮನೋವಿಜ್ಞಾನದ ವಿಭಾಗ ಇರುತ್ತದೆ. ಇವುಗಳ ಸಂಖ್ಯೆ ಇನ್ನೂ ಹೆಚ್ಚಲಿದೆ.